# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಹೆಚ್ ಎಸ್ ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 981 |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ಮಾನ್ಯ ಪಶುಸಂಗೋಪನೆ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೇರೆ ಬೇರೆ ಕಾರಣಗಳಿಂದ ಗಾಯಗೊಳ್ಳುವ ಮತ್ತು ರೋಗರುಜಿನಗಳಿಗೆ ತುತ್ತಾಗುವ ಪಶುಗಳ ಸಂರಕ್ಷಣೆಗಾಗಿ ಸರ್ಕಾರದ ವತಿಯಿಂದ ಗೋರಕ್ಷಣೆ ಆಂಬುಲೆನ್ಸ್‌ಗಳನ್ನು ಈಗಾಗಲೇ ಒದಗಿಸಲಾಗಿದೆಯೇ; | ಒದಗಿಸಲಾಗಿದೆ. |
| ಆ) | ಒದಗಿಸಲಾಗಿದ್ದಲ್ಲಿ, ಒಟ್ಟು ಎಷ್ಟು ಆಂಬುಲೆನ್ಸ್‌ಗಳು ಎಲ್ಲೆಲ್ಲಿ ಕಾರ್ಯನಿರತವಾಗಿವೆ; | ಬೆಂಗಳೂರು ನಗರ ಜಿಲ್ಲೆಗೆ ಒಟ್ಟು 9 ಸಂಚಾರಿ ಪಶು ಚಿಕಿತ್ಸಾ ಘಟಕ ವಾಹನಗಳನ್ನು ಒದಗಿಸಲಾಗಿದ್ದು, ಈ ಕೆಳಕಂಡಂತೆ ತಾಲ್ಲೂಕು ಹಾಗೂ ನಗರ ಪ್ರದೇಶ (ಬಿಬಿಎಂಪಿ) ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. |

| ಕ್ರಸಂ | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಆಂಬುಲೆನ್ಸ್ ವಾಹನಗಳ ವಿವರ |
|---|---|
| 1 | ಆನೇಕಲ್ ತಾಲ್ಲೂಕು. |
| 2 | ಬೆಂಗಳೂರು ಪೂರ್ವ |
| 3 | ಬೆಂಗಳೂರು ಉತ್ತರ |
| 4 | ಬೆಂಗಳೂರು ದಕ್ಷಿಣ |
| 5 | ಯಲಹಂಕ |
| 6 | ಪಾಲಿಕ್ಲಿನಿಕ್, ದಂಡುಪ್ರದೇಶ |
| 7 | ಬಿಬಿಎಂಪಿ ಝೋನ್-1 |
| 8 | ಬಿಬಿಎಂಪಿ ಝೋನ್-2 |
| 9 | ಬಿಬಿಎಂಪಿ ಝೋನ್-3 |

| | | |
|---|---|---|
| ಇ) | ಈ ಆಂಬುಲೆನ್ಸ್‌ನಲ್ಲಿ ಯಾವ ಯಾವ ಸೌಲಭ್ಯಗಳು ಇರುತ್ತವೆ; (ಸಂಕ್ಷಿಪ್ತ ವಿವರ ನೀಡುವುದು) | ಜಾನುವಾರುಗಳ ಚಿಕಿತ್ಸೆಗಾಗಿ ಹಾಗೂ ಆರೋಗ್ಯ ರಕ್ಷಣೆಗಾಗಿ ಅಗತ್ಯವಿರುವ ಔಷಧಿಗಳು, ಲಸಿಕೆಗಳು, ಶಸ್ತ್ರಚಿಕಿತ್ಸಾ ಉಪಕರಣಗಳು ಹಾಗೂ ಕೃತಕ ಗರ್ಭಧಾರಣಾ ಸಲಕರಣೆಗಳ ಸೌಲಭ್ಯವು ಆಂಬುಲೆನ್ಸ್‌ನಲ್ಲಿ ಇರುತ್ತವೆ. |
| ಈ) | ಈ ಆಂಬುಲೆನ್ಸ್‌ನಲ್ಲಿ ಖರೀದಿಗೆ ಖರ್ಚಾದ ಒಟ್ಟು ವೆಚ್ಚವೆಷ್ಟು; | ಕೇಂದ್ರ ಸರ್ಕಾರವು ಪ್ರತಿ ವಾಹನಕ್ಕೆ ರೂ.16.00 ಲಕ್ಷದಂತೆ 275 ವಾಹನಗಳ ಖರೀದಿಗೆ ಶೇ. 100 ರಷ್ಟು ಅನುದಾನ ರೂ.4400.00 ಲಕ್ಷಗಳನ್ನು ಒದಗಿಸಿದ್ದು, ಇದರಲ್ಲಿ ಪ್ರತಿ ವಾಹನಕ್ಕೆ ರೂ.15,94,111=.00 ಗಳಂತೆ 275 ವಾಹನಗಳಿಗೆ ರೂ.43,83,80,525=00 ಗಳನ್ನು ವೆಚ್ಚ ಮಾಡಲಾಗಿದ್ದು, ಸದರಿ ವಾಹನಗಳನ್ನು ಟಾಟಾ ಮೋಟಾರ್ಸ್ ಕಂಪನಿ, ಪುಣೆ, ಮುಂಬೈರವರಿಂದ GeM Portal ನಲ್ಲಿ ಖರೀದಿಸಲಾಗಿರುತ್ತದೆ. |
| ಉ) | ಈ ವೆಚ್ಚವನ್ನು ಯಾವ ಅನುದಾನದಡಿಯಲ್ಲಿ ಭರಿಸಲಾಗುತ್ತದೆ? | ಜಾನುವಾರು ಆರೋಗ್ಯ ಹಾಗೂ ರೋಗ ನಿಯಂತ್ರಣ ಕಾರ್ಯಕ್ರಮದ ಅಡಿಯಲ್ಲಿ ಕೇಂದ್ರ ಸರ್ಕಾರವು ಶೇ.100 ರಷ್ಟು ಅನುದಾನವನ್ನು ಒದಗಿಸಿದ್ದು, ಸದರಿ ಅನುದಾನದಲ್ಲಿ ವಾಹನಗಳ ಖರೀದಿ ವೆಚ್ಚವನ್ನು ಭರಿಸಲಾಗಿರುತ್ತದೆ. |

**ಇ- ಪಸಂಮೀ 216 ಸಲೆವಿ 2022**

**(ಪ್ರಭು ಬಿ. ಚವ್ಹಾಣ್)**
**ಪಶುಸಂಗೋಪನೆ ಸಚಿವರು**